11/1

# 2011

## LAW

## Paper 1

*Time : 3 Hours ]* *[ Maximum Marks : 300*

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory***.*
*Answer any* **three** *questions in Part D.*

SEAL

**ವಿಶೇಷ ಸೂಚನೆ :** ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. Write short notes on the following :

   (a) Discretionary powers of Governor.

   (b) Meaning assigned to 'other authorities' in Article 12 of the Constitution of India.

   (c) Intervention.

   (d) Procedure for Appointment of Judges to the ICJ.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** ಕೆಳಗಿನವುಗಳಿಗೆ ಕಿರುಟಿಪ್ಪಣಿ ಬರೆಯಿರಿ :

(ಎ) ರಾಜ್ಯಪಾಲರ ವಿವೇಚನಾಧಿಕಾರಗಳು.

(ಬಿ) ಭಾರತೀಯ ಸಂವಿಧಾನದ 12ನೇ ಅನುಚ್ಛೇದದಲ್ಲಿ, 'ಇತರ ಪ್ರಾಧಿಕಾರಗಳು' ಎಂಬುದಕ್ಕೆ ಅಧ್ಯಾರೋಪಿಸಲಾದ ಅರ್ಥ.

(ಸಿ) ಮಧ್ಯ ಪ್ರವೇಶ

(ಡಿ) ICJಗೆ ನ್ಯಾಯಾಧೀಶರನ್ನು ನೇಮಕಮಾಡುವ ವಿಧಾನ.

## PART B

*10×10=100*

*Answer each question in about 100 words. Each question carries 10 marks.*

2. Indian Constitution is a living entity. Discuss.

3. Write a critical comment on Judges Cases I, II and later. State the procedure of the appointment of the judges of the Supreme Court and the High Courts emerging from them.

4. Explain the rules of natural justice and the effect of their non-observance. What is Official Bias ?

5. State the Ordinance making power of President and its duration.

6. Write a comment on Financial Federalism in India.

7. Write a comment on various subjects of International Law.

8. State the instances in which use of force is permitted under the UN Charter. Refer to Charter provisions and Customary International law.

9. State the sources of International law.

10. Discuss the powers of the Human Rights Council.

11. Write a short note on : 'Right of Hot pursuit'.

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 100 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಭಾರತೀಯ ಸಂವಿಧಾನವು ಒಂದು ಜೀವಂತ ಅಸ್ತಿತ್ವ. ಚರ್ಚಿಸಿ.

**3.** ನ್ಯಾಯಾಧೀಶರ ಪ್ರಕರಣಗಳು I, II ಮತ್ತು ಆನಂತರದ್ದನ್ನು ಕುರಿತು ವಿಮರ್ಶಾತ್ಮಕವಾಗಿ ಬರೆಯಿರಿ. ಇವುಗಳಿಂದ ಉದ್ಭವಿಸಿದ ಪ್ರಕಾರ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯದ ನ್ಯಾಯಾಧೀಶರುಗಳ ನೇಮಕಾತಿಯ ವಿಧಾನವನ್ನು ವಿವರಿಸಿ.

**4.** ಸ್ವಭಾವಸಿದ್ಧ ನ್ಯಾಯದ ನಿಯಮಗಳನ್ನು ವಿವರಿಸಿ ಮತ್ತು ಇವುಗಳನ್ನು ಅನುಸರಿಸದಿದ್ದರೆ ಆಗುವ ಪರಿಣಾಮಗಳನ್ನು ತಿಳಿಸಿ. ಅಫಿಷಿಯಲ್ ಬಯಾಸ್ ಎಂದರೆ ಏನು ?

**5.** ಸುಗ್ರೀವಾಜ್ಞೆ ಮಾಡಲು ರಾಷ್ಟ್ರಪತಿಯವರಿಗೆ ಇರುವ ಅಧಿಕಾರವನ್ನು ವಿವರಿಸಿ ಮತ್ತು ಅದರ ಅವಧಿ ಎಷ್ಟು ಎಂದು ತಿಳಿಸಿ.

**6.** ಭಾರತದಲ್ಲಿ ಹಣಕಾಸಿನ ಫೆಡರಲಿಸಂ ಕುರಿತು ನಿಮ್ಮ ವ್ಯಾಖ್ಯಾನವನ್ನು ಬರೆಯಿರಿ.

**7.** ಅಂತರ್‌ರಾಷ್ಟ್ರೀಯ ಕಾನೂನಿನ ವಿವಿಧ ವಿಷಯಗಳ ಬಗ್ಗೆ ನಿಮ್ಮ ವ್ಯಾಖ್ಯಾನವನ್ನು ಬರೆಯಿರಿ.

**8.** ವಿಶ್ವ ಸಂಸ್ಥೆಯ ಸನ್ನದಿನ ಅನ್ವಯ ಯಾವ ನಿದರ್ಶನಗಳಲ್ಲಿ ಬಲದ ಪ್ರಯೋಗವನ್ನು ಅನುಮತಿಸಲಾಗಿದೆ ಎಂಬುದನ್ನು ನಿರೂಪಿಸಿ. ಈ ಪ್ರಣಾಳಿಕೆಯ ಉಪಬಂಧಗಳು ಮತ್ತು ರೂಢಿಜನ್ಯ ಅಂತರ್‌ರಾಷ್ಟ್ರೀಯ ಕಾನೂನನ್ನು ಪರಾಮರ್ಶಿಸಿ.

**9.** ಅಂತರ್‌ರಾಷ್ಟ್ರೀಯ ಕಾನೂನಿನ ಆಕರಗಳು ಯಾವುವು ? ಎಂಬುದನ್ನು ತಿಳಿಸಿ.

**10.** ಮಾನವಹಕ್ಕುಗಳ ಮಂಡಳಿಯ ಅಧಿಕಾರಗಳನ್ನು ಕುರಿತು ಚರ್ಚಿಸಿ.

**11.** "Right of Hot Pursuit" ಕುರಿತು ಕಿರುಟಿಪ್ಪಣಿ ಬರೆಯಿರಿ.

## PART C

*6×15=90*

*Answer each question in about 150 words. Each question carries 15 marks.*

**12.** What is excessive delegation and the method of its control ? What do you mean by 'narrower version' of delegation ?

**13.** Briefly explain the Doctrine of 'Eminent Domain'. Substantiate with the help of decided cases.

**14.** Discuss the purposes of freedom of trade and commerce in India. Discuss the power of States to restrict the freedom in the light of recent judicial decisions.

**15.** Discuss the UNCLOS-III provisions for the delimitation of Continental-Shelf.

**16.** Define Recognition. Discuss the effect of non-recognition. Can State A bring a suit against State B which is a non-recognized government ?

**17.** Asylum is a necessary attribute of Sovereignty — explain. In what respect does diplomatic asylum differ from territorial asylum ?

## ಭಾಗ C

*6×15=90*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 150 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಅತ್ಯಧಿಕವಾದ ಪ್ರತ್ಯಾಯೋಜನೆ ಎಂದರೇನು ಮತ್ತು ಅದನ್ನು ನಿಯಂತ್ರಿಸುವ ವಿಧಾನವನ್ನು ತಿಳಿಸಿ. ಪ್ರತ್ಯಾಯೋಜನೆಯ 'ಸಂಕುಚಿತ ಆವೃತ್ತಿ' (narrower version) ಎಂಬುದನ್ನು ಹೇಗೆ ಅರ್ಥೈಸುತ್ತೀರಿ ?

**13.** 'Eminent Domain' (ಪರಮಾಧಿಕಾರ) ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ವಿವರಿಸಿ. ನಿರ್ಧಾರವಾಗಿರುವ ಪ್ರಕರಣಗಳ ನೆರವಿನಿಂದ ಇದನ್ನು ಪುಷ್ಟೀಕರಿಸಿ.

**14.** ಭಾರತದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಸ್ವಾತಂತ್ರ್ಯದ ಉದ್ದೇಶವನ್ನು ಕುರಿತು ಚರ್ಚಿಸಿ. ಇತ್ತೀಚಿನ ನ್ಯಾಯಿಕ ನಿರ್ಣಯಗಳ ಬೆಳಕಿನಲ್ಲಿ, ಈ ಸ್ವಾತಂತ್ರ್ಯವನ್ನು ನಿರ್ಬಂಧಿಸಲು ರಾಜ್ಯಗಳಿಗಿರುವ ಅಧಿಕಾರವನ್ನು ಕುರಿತು ಚರ್ಚಿಸಿ.

**15.** ಭೂಖಂಡ ಚಾಚುವಿನ ಗಡಿರೇಖಾ ನಿರ್ಧಾರಕ್ಕಾಗಿ UNCLOS-III ಉಪಬಂಧಗಳ ಬಗ್ಗೆ ಚರ್ಚಿಸಿ.

**16.** ಮಾನ್ಯತೆ ಎಂಬುದನ್ನು ವಿವರಿಸಿ. ಮಾನ್ಯತೆ ಇಲ್ಲದಿರುವಿಕೆಯ ಪರಿಣಾಮದ ಬಗ್ಗೆ ಚರ್ಚಿಸಿ. ಮಾನ್ಯತೆಪಡೆದಿಲ್ಲದ ಸರ್ಕಾರವಾಗಿರುವ B ರಾಜ್ಯದ ವಿರುದ್ಧ A ರಾಜ್ಯವು ದಾವೆ ಹೂಡಬಹುದೆ ?

**17.** ಆಶ್ರಯವು ಸಾರ್ವಭೌಮತ್ವದ ಒಂದು ಆವಶ್ಯಕ ಆರೋಪಣ - ವಿವರಿಸಿ. ರಾಜತಾಂತ್ರಿಕ ಆಶ್ರಯವು ಯಾವ ರೀತಿಯಲ್ಲಿ ಪ್ರಾದೇಶಿಕ ಆಶ್ರಯಕ್ಕಿಂತ ಭಿನ್ನ ?

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** Discuss the impact of Article 19(2) to Article 19(6) of the Constitution giving powers to State on various freedoms enacted in Article 19(1). How and on what grounds may these powers be exercised ? Whether the courts have sought to make a dent in these powers by liberal interpretation of Article 21 ?

**19.** State the importance of $52^{nd}$ and subsequent amendments to the Constitution inserting $10^{th}$ Schedule and other articles in the Constitution of India. Discuss whether the Parliamentary privileges and other powers of Parliamentarians and Governmental Institutions have dwindled and position of political parties got enhanced.

**20.** State the distribution of legislative powers between Centre and States. State the relevance of residuary power of Centre. Comment on the amending power of Parliament in the lists I, II and III or other Articles affecting rights of States.

**21.** (a) Discuss State succession and state the difference between Universal and Partial Succession.

(b) Critically examine International law as to the power of a party to make reservation(s) while negotiating a treaty.

**22.** 'There is a general obligation on member states to settle their disputes by peaceful means.' Substantiate this statement. Critically examine the effectiveness of various peaceful means available for such settlement of disputes.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೂ ಸುಮಾರು 300 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** 19(1) ನೇ ಅನುಚ್ಛೇದದಲ್ಲಿ ಅಧಿನಿಯಮಿತವಾಗಿರುವ ವಿವಿಧ ಸ್ವಾತಂತ್ರ್ಯಗಳ ಬಗ್ಗೆ ರಾಜ್ಯಗಳಿಗೆ ಅಧಿಕಾರ ನೀಡುವ ಸಂವಿಧಾನದ ಅನುಚ್ಛೇದ 19(2) ರಿಂದ ಅನುಚ್ಛೇದ 19(6) ರವರೆಗಿನ ಅನುಚ್ಛೇದಗಳ ಪರಿಣಾಮ ಕುರಿತು ಚರ್ಚಿಸಿ. ಈ ಅಧಿಕಾರಗಳನ್ನು ಹೇಗೆ ಮತ್ತು ಯಾವ ಆಧಾರಗಳ ಮೇಲೆ ಚಲಾಯಿಸಬಹುದಾಗಿದೆ ? 21ನೇ ಅನುಚ್ಛೇದವನ್ನು ಉದಾರವಾಗಿ ವ್ಯಾಖ್ಯಾನಿಸುವ ಮೂಲಕ ನ್ಯಾಯಾಲಗಳು ಈ ಅಧಿಕಾರಗಳನ್ನು ದುರ್ಬಲಗೊಳಿಸುವ ಪ್ರಯತ್ನ ಮಾಡಿವೆಯೆ ?

**19.** ಭಾರತದ ಸಂವಿಧಾನದಲ್ಲಿ, 10ನೇ ಅನುಸೂಚಿ ಹಾಗೂ ಇತರ ಅನುಚ್ಛೇದಗಳನ್ನು ಸೇರಿಸುವಂತಹ ಸಂವಿಧಾನದ 52ನೇ ಹಾಗೂ ಆ ತರುವಾಯದ ತಿದ್ದುಪಡಿಗಳ ಮಹತ್ವವನ್ನು ನಿರೂಪಿಸಿ. ಸಂಸತ್ ಪಟುಗಳ ಹಾಗೂ ಇತರ ಸರ್ಕಾರೀ ವ್ಯವಸ್ಥೆಗಳ ಸಂಸದೀಯ ಸವಲತ್ತುಗಳು ಹಾಗೂ ಅಧಿಕಾರಗಳು ಕಿರಿದಾಗಿವೆಯೆ ಮತ್ತು ರಾಜಕೀಯ ಪಕ್ಷಗಳ ಸ್ಥಾನ ಅಧಿಕಗೊಂಡಿದೆಯೆ ? ಚರ್ಚಿಸಿ.

**20.** ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸನಾತ್ಮಕ ಅಧಿಕಾರಗಳ ಹಂಚಿಕೆಯನ್ನು ವಿವರಿಸಿ. ಕೇಂದ್ರದ ಉಳಿಕೆ ಅಧಿಕಾರದ ಪ್ರಸ್ತುತತೆಯನ್ನು ನಿರೂಪಿಸಿ. ರಾಜ್ಯಗಳ ಹಕ್ಕುಗಳನ್ನು ಬಾಧಿಸುವಂತೆ I, II ಮತ್ತು III ನೇ ಪಟ್ಟಿಯಲ್ಲಿ ಅಥವಾ ಇತರ ಅನುಚ್ಛೇದಗಳಲ್ಲಿ ತಿದ್ದುಪಡಿಮಾಡುವ ಸಂಸತ್ತಿನ ಅಧಿಕಾರವನ್ನು ಕುರಿತು ನಿಮ್ಮ ವ್ಯಾಖ್ಯಾನವೇನು ?

**21.** (ಎ) ರಾಜ್ಯ ಉತ್ತರಾಧಿಕಾರವನ್ನು ಕುರಿತು ಚರ್ಚಿಸಿ. ಸರ್ವಸ್ವ ಉತ್ತರಾಧಿಕಾರ ಮತ್ತು ಭಾಗಶಃ ಉತ್ತರಾಧಿಕಾರಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

(ಬಿ) ಒಂದು ಕೌಲಿನ ಬಗ್ಗೆ ಮಾತುಕತೆ ನಡೆಸುವಾಗ, ತನ್ನ ಅಸಮ್ಮತಿಯನ್ನು (ಗಳನ್ನು) ವ್ಯಕ್ತ ಪಡಿಸಲು ಒಂದು ಪಕ್ಷಕ್ಕೆ ಇರುವ ಅಧಿಕಾರಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಕಾನೂನನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**22.** "ತಮ್ಮ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವ ಸಾಮಾನ್ಯ ಹೊಣೆಗಾರಿಕೆ ಸದಸ್ಯ ರಾಷ್ಟ್ರಗಳ ಮೇಲಿರುತ್ತದೆ." ಈ ಹೇಳಿಕೆಯನ್ನು ಪುಷ್ಟೀಕರಿಸಿ. ಇಂತಹ ವಿವಾದಗಳ ಇತ್ಯರ್ಥಕ್ಕೆ ಲಭ್ಯವಿರುವ ವಿವಿಧ ಶಾಂತಿಯುತ ವಿಧಾನಗಳ ಪರಿಣಾಮಕತ್ವವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**11/1**

# 2011

## ಕಾನೂನು

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

---

**ಸೂಚನೆಗಳು**

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

ಭಾಗ *A*, *B* ಮತ್ತು *C* ಯಲ್ಲಿನ ಎಲ್ಲ ಪ್ರಶ್ನೆಗಳನ್ನು **ಕಡ್ಡಾಯವಾಗಿ** ಉತ್ತರಿಸಿ.
ಭಾಗ *D* ಯಲ್ಲಿಯ ಯಾವುದಾದರೂ **ಮೂರು** ಪ್ರಶ್ನೆಗಳನ್ನು ಉತ್ತರಿಸಿ.

SEAL

---

**Note :** *The English version of the instructions is printed on the front cover of this question paper.*

**11/2**

# 2011

## LAW

## Paper 2

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

**1.** (a) Explain mistake of fact as a defence in Criminal law.

(b) Explain consent obtained by threat to kill in Contract law.

(c) Comment on *injuria sine damnum.*

(d) Who is 'Consumer' under CPA, 1986 ?

## ಭಾಗ A

4×5=20

ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.

1. (ಎ) ಕ್ರಿಮಿನಲ್ ಕಾನೂನಿನಲ್ಲಿ, ಸಂಗತಿಯ ತಪ್ಪುತಿಳುವಳಿಕೆ ಒಂದು ಪ್ರತಿರಕ್ಷಣೆಯಾಗಿದೆ ವಿವರಿಸಿ.

   (ಬಿ) ಕರಾರು ಕಾನೂನಿನಲ್ಲಿ, ಕೊಲ್ಲುವ ಬೆದರಿಕೆ ಒಡ್ಡಿ ಒಪ್ಪಿಗೆಯನ್ನು ಪಡೆದುಕೊಳ್ಳುವುದನ್ನು ವಿವರಿಸಿ.

   (ಸಿ) *Injuria sine damnum* ಬಗ್ಗೆ ವ್ಯಾಖ್ಯಾನಿಸಿ.

   (ಡಿ) CPA, 1986 ರ ಅನ್ವಯ, 'ಬಳಕೆದಾರ ಎಂದರೆ' ಯಾರು ?

## PART B

*10×10=100*

*Answer each question in about 100 words. Each question carries 10 marks.*

**2.** State briefly the distinguishing features of 'culpable homicide' and 'murder'.

**3.** State the method of determining intention under criminal law.

**4.** Discuss the provisions relating to joint liability in IPC.

**5.** Comment on dishonour of cheques stating amendments made in NI Act to tackle menace of dishonour of cheques.

**6.** State the circumstances in which a partnership firm can be dissolved by court.

**7.** Explain partnership by holding out. Discuss the liability of such partners.

**8.** "Quasi contracts come into existence either by law or by judicial principles and not out of agreement between two persons." Discuss.

**9.** What do you mean by "Unfair Trade Practices" under CP Act 1986 and MRTP Act 1969 ?

**10.** Explain the meaning of (i) 'service', (ii) defect or deficiency under the Consumer Protection Act, 1986. Is 'negligence' a necessary ingredient for grant of damages under the Act or is the liability absolute ?

**11.** Explain defamation stating applicability of Libel and Slander in India. How will publication on Internet of such materials be dealt with ?

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 100 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** 'ಅಪರಾಧಿಕ ನರಹತ್ಯೆ' ಮತ್ತು 'ಕೊಲೆ' ಇವುಗಳ ನಡುವಿನ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

**3.** ಕ್ರಿಮಿನಲ್ ಕಾನೂನಿನ ಅನ್ವಯ, ಉದ್ದೇಶ ಎಂಬುದನ್ನು ನಿರ್ಣಯಿಸುವ ವಿಧಾನವನ್ನು ನಿರೂಪಿಸಿ.

**4.** IPC ಯಲ್ಲಿ ಜಂಟಿ ಹೊಣೆಗಾರಿಕೆಗೆ ಸಂಬಂಧಿಸಿದ ಉಪಬಂಧಗಳ ಬಗ್ಗೆ ಚರ್ಚಿಸಿ.

**5.** ಚೆಕ್ಕುಗಳ ಅನಾದರಣೆಯ ಹಾವಳಿಯನ್ನು ನಿಭಾಯಿಸುವುದಕ್ಕಾಗಿ NI ಕಾಯಿದೆಯಲ್ಲಿ ಮಾಡಿರುವ ತಿದ್ದುಪಡಿಗಳನ್ನು ತಿಳಿಸುವುದರೊಂದಿಗೆ, ಚೆಕ್ಕುಗಳ ಅನಾದರಣೆ ಬಗ್ಗೆ ವ್ಯಾಖ್ಯಾನಿಸಿ.

**6.** ಸಹಭಾಗಿತ್ವದ ಉದ್ದಿಮೆಯೊಂದನ್ನು ನ್ಯಾಯಾಲಯವು ಯಾವ ಸಂದರ್ಭಗಳಲ್ಲಿ ರದ್ದು ಮಾಡಬಹುದಾಗಿದೆ ಎಂಬುದನ್ನು ವಿವರಿಸಿ.

**7.** ಬಾಹ್ಯ ಹಿಡುವಳಿ (holding out) ಮೂಲಕ ಸಹ ಭಾಗಿತ್ವ ಎಂಬುದನ್ನು ವಿವರಿಸಿ. ಇಂತಹ ಪಾಲುದಾರರ ಹೊಣೆಗಾರಿಕೆ ಕುರಿತು ಚರ್ಚಿಸಿ.

**8.** "ಕರಾರು ಸದೃಶವಾದವುಗಳು, ಕಾನೂನು ಇಲ್ಲವೇ ನ್ಯಾಯಿಕ ತತ್ವಗಳ ಮೂಲಕ ಅಸ್ತಿತ್ವಕ್ಕೆ ಬರುತ್ತವೆಯೇ ಹೊರತು ಇಬ್ಬರು ವ್ಯಕ್ತಿಗಳ ನಡುವಿನ ಒಪ್ಪಂದದ ಮೂಲಕ ಅಲ್ಲ." ಚರ್ಚಿಸಿ.

**9.** CP ಕಾಯಿದೆ 1986 ಮತ್ತು MRTP ಕಾಯಿದೆ 1969ರ ಅನ್ವಯ "ಅನುಚಿತ ವ್ಯಾಪಾರ ಪದ್ಧತಿಗಳು" ಎಂದರೇನು ?

**10.** ಗ್ರಾಹಕರ ರಕ್ಷಣಾ ಕಾಯಿದೆ, 1986 ರ ಅನ್ವಯ (i) ಸೇವೆ (ii) ದೋಷ ಅಥವಾ ನ್ಯೂನತೆ ಎಂಬುವುಗಳ ಅರ್ಥವನ್ನು ವಿವರಿಸಿ. ಈ ಕಾಯಿದೆಯ ಅನ್ವಯ ಹಾನಿಗಳನ್ನು ಕಟ್ಟಿಕೊಡುವುದಕ್ಕೆ 'ನಿರ್ಲಕ್ಷ್ಯತನ'ವು ಒಂದು ಅವಶ್ಯಕ ಅಂಶವಾಗಿದೆಯೆ ಅಥವಾ ಹೊಣೆಗಾರಿಕೆಯು ನಿರುಪಾಧಿಕವೆ ?

**11.** ಭಾರತದಲ್ಲಿ ಮಾನನಷ್ಟಕರ ಲೇಖನ ಮತ್ತು ಅಪನಿಂದೆಯ ಅನ್ವಯಿಕತೆಯನ್ನು ನಿರೂಪಿಸುವುದರೊಂದಿಗೆ ಮಾನಹಾನಿಯನ್ನು ವಿವರಿಸಿ. ಅಂತರ್ಜಾಲದಲ್ಲಿ ಇಂತಹ ವಿಷಯಗಳು ಪ್ರಕಟವಾದರೆ ಅವುಗಳ ಬಗ್ಗೆ ಹೇಗೆ ವ್ಯವಹರಿಸಲಾಗುತ್ತದೆ ?

## PART C

6×15=90

*Answer each question in about 150 words. Each question carries 15 marks.*

**12.** K is producing poisonous gas under proper licenses. Without any negligence, there occurs a gas leak. It results in the death of few persons in the vicinity. State the liability of K.

**13.** Some person(s) on a ship registered in a European country do the following acts. State whether these persons can be validly tried and punished under IPC.

(i) Kill few persons in Indian territorial waters.

(ii) Kill few persons in International waters near India. The offenders are apprehended by Indian authorities.

(iii) They target or hack a computer resource in India.

**14.** What is breach of contract and how does it differ from anticipatory breach of contract ? State the law for grant of damages under Contract law.

**15.** State the rule of *caveat emptor* and its exceptions. State their relative importance and impact of CP Act, 1986.

**16.** Do you agree with lesser penalty for 'dowry death' than 'culpable homicide' or 'murder' when the result is death of a woman albeit 'married woman'. For successful conviction under 'dowry death', what has to be proved ?

**17.** What is meant by material alteration of a negotiable instrument ? State the consequences of dishonour of a bill of exchange.

## ಭಾಗ C

*6×15=90*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 150 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** K ಎಂಬಾತನು, ಸಮರ್ಪಕ ಲೈಸೆನ್ಸ್‌ಗಳೊಂದಿಗೆ ವಿಷಾಯುಕ್ತ ಅನಿಲವನ್ನು ಉತ್ಪಾದಿಸುತ್ತಿದ್ದಾನೆ. ಯಾವುದೇ ನಿರ್ಲಕ್ಷ್ಯತನವಿಲ್ಲದೆ ಅನಿಲ ಸೋರಿಕೆ ಉಂಟಾಗುತ್ತದೆ ಇದರಿಂದ ಸುತ್ತ ಮುತ್ತಲಿನ ಪ್ರದೇಶದ ಕೆಲವು ಮಂದಿ ಸಾಯುತ್ತಾರೆ. ಇಲ್ಲಿ K ಯ ಹೊಣೆಗಾರಿಕೆಯನ್ನು ತಿಳಿಸಿ.

**13.** ಯೂರೋಪಿಯನ್ ದೇಶದಲ್ಲಿ ನೋಂದಣಿಯಾದ ಒಂದು ಹಡಗಿನಲ್ಲಿ ಒಬ್ಬ ಅಥವಾ ಕೆಲವು ವ್ಯಕ್ತಿಗಳು ಕೆಳಕಂಡ ಕೃತ್ಯಗಳನ್ನು ನಡೆಸುತ್ತಾರೆ. ಈ ವ್ಯಕ್ತಿಗಳ ಬಗ್ಗೆ IPC ಪ್ರಕಾರ, ಕಾನೂನು ಮಾನ್ಯವಾಗಿ ವಿಚಾರಣೆ ನಡೆಸಬಹುದೆ ಮತ್ತು ಶಿಕ್ಷಿಸಬಹುದೆ ? ತಿಳಿಸಿ.

(i) ಭಾರತದ ಪ್ರಾದೇಶಿಕ ಜಲಪ್ರಾಂಗಣದಲ್ಲಿ ಕೆಲವರನ್ನು ಕೊಲ್ಲುತಾರೆ.

(ii) ಭಾರತದ ಸಮೀಪದಲ್ಲಿ, ಅಂತರರಾಷ್ಟ್ರೀಯ ಜಲ ಪ್ರಾಂಗಣದಲ್ಲಿ ಕೆಲವು ವ್ಯಕ್ತಿಗಳನ್ನು ಕೊಲ್ಲುತ್ತಾರೆ. ಅಪರಾಧಿಗಳನ್ನು ಭಾರತದ ಅಧಿಕಾರಿಗಳು ದಸ್ತಗಿರಿ ಮಾಡುತ್ತಾರೆ.

(iii) ಅವರು ಭಾರತದ ಒಂದು ಕಂಪ್ಯೂಟರ್ ಸಂಪನ್ಮೂಲಕ್ಕೆ ಗುರಿ ಇಟ್ಟಿದ್ದಾರೆ ಅಥವಾ ಹ್ಯಾಕ್ ಮಾಡುತ್ತಾರೆ.

**14.** ಕರಾರು ಉಲ್ಲಂಘನೆ ಎಂದರೇನು ? ನಿರೀಕ್ಷಣಾ ಕರಾರು ಉಲ್ಲಂಘನೆಗಿಂತ ಇದು ಹೇಗೆ ಭಿನ್ನ ? ಕರಾರು ಕಾನೂನಿನ ಅನ್ವಯ, ಹಾನಿಗಳನ್ನು ಕಟ್ಟಿಕೊಡುವುದಕ್ಕೆ ಇರುವ ಕಾನೂನನ್ನು ತಿಳಿಸಿ.

**15.** ಕೇವಿಯಟ್ ಎಂಪ್ಟರ್ (ಕೊಳ್ಳುವವನೇ ಎಚ್ಚರಿಕೆ) ನಿಯಮವನ್ನು ಹಾಗೂ ಅದರ ಅಪವಾದಗಳನ್ನು ನಿರೂಪಿಸಿ. ಇವುಗಳ ಸಾಪೇಕ್ಷ ಪ್ರಾಮುಖ್ಯತೆ ಮತ್ತು CP ಕಾಯಿದೆ, 1986ರ ಪರಿಣಾಮವನ್ನು ವಿವರಿಸಿ.

**16.** 'ವಿವಾಹಿತ ಹೆಂಗಸಾದರೂ' ಸರಿಯೇ ಅದು ಮಹಿಳೆಯೊಬ್ಬಳ ಸಾವಿನಲ್ಲಿ ಪರ್ಯಾವಸಾನವಾಗಿದ್ದಾಗ, 'ವರದಕ್ಷಿಣೆ ಸಾವಿಗೆ' 'ಅಪರಾಧಿಕ ನರಹತ್ಯೆ' ಅಥವಾ ಕೊಲೆಗಿಂತ ಕಡಿಮೆ ದಂಡ ವಿಧಿಸುವುದನ್ನು ನೀವು ಒಪ್ಪುತೀರಾ ? 'ವರದಕ್ಷಿಣೆ ಸಾವಿನ' ಅನ್ವಯ ಅಪರಾಧ ನಿರ್ಣಯವು ಸಂಪೂರ್ಣ ಯಶಸ್ವಿಯಾಗಬೇಕಾದರೆ ಯಾವ ಅಂಶವನ್ನು ರುಜುವಾತು ಪಡಿಸಬೇಕು ?

**17.** ವರ್ಗಾವಣೀಯ ದಾಖಲೆಯ ತಿದ್ದುಪಡಿ ಎಂದರೇನು ? ವಿನಿಮಯ ಪತ್ರದ ಅನಾದರಣೆಯಿಂದಾಗುವ ಪರಿಣಾಮಗಳನ್ನು ನಿರೂಪಿಸಿ.

## PART D

$3 \times 30 = 90$

*Answer any* ***three*** *of the following questions, each in about 300 words. Each question carries 30 marks.*

**18.** State the offences against property in IPC, grading them in accordance with maximum punishment. Discuss the ingredients of theft and extortion stating punishment for them. State the provisions of criminal misappropriation.

**19.** (a) Enlist all offences under IPC relating to matrimonial relationship. State in detail the offence of adultery and bigamy. Who can file complaint and who may be proceeded against ?

(b) The accused after getting a decree of restitution of conjugal rights in his favour, went to the place of the wife living separately and there he had sex with his wife without her consent. The wife wants her husband to be prosecuted for rape. Give your legal advice as to the offences for which he may be tried under IPC.

**20.** State the antecedents to formation of a valid contract and how it is vitiated. Refer to provisions/cases.

**21.** (a) Explain essentials of contract of sale. Distinguish between sale and hire-purchase.

(b) State the law for admitting a minor to the benefits of partnership. State his liability in respect of partnership business.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೂ ಸುಮಾರು 300 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** IPC ಯಲ್ಲಿ ಆಸ್ತಿಯ ವಿರುದ್ಧದ ಅಪರಾಧಗಳೆಂದರೆ ಏನು ಎಂಬುದನ್ನು ನಿರೂಪಿಸಿ ಮತ್ತು ಗರಿಷ್ಠ ಶಿಕ್ಷೆಗೆ ಅನುಗುಣವಾಗಿ ಅವುಗಳ ಶ್ರೇಣೀಕರಣವನ್ನು ತಿಳಿಸಿ. ಕಳವು ಮತ್ತು ಬಲಾತ್ಕಾರ ಗ್ರಹಣದ ಘಟಕಾಂಶಗಳನ್ನು ಚರ್ಚಿಸಿ ಮತ್ತು ಇವುಗಳಿಗೆ ನೀಡಲಾಗುವ ಶಿಕ್ಷೆಯನ್ನು ತಿಳಿಸಿ. ಕ್ರಿಮಿನಲ್ ದುರುಪಯೋಗವು ಒಳಗೊಳ್ಳುವ ಅಂಶಗಳೇನು ತಿಳಿಸಿ.

**19.** (ಎ) ವೈವಾಹಿಕ ಸಂಬಂಧವನ್ನು ಕುರಿತಂತೆ IPC ಯ ಕೆಳಗೆ ಕೊಟ್ಟಿರುವ ಎಲ್ಲ ಅಪರಾಧಗಳನ್ನು ಪಟ್ಟಿಮಾಡಿ. ವ್ಯಭಿಚಾರ ಮತ್ತು ದ್ವಿಪತಿತ್ವ/ದ್ವಿಪತ್ನಿತ್ವ ದ ಅಪರಾಧವನ್ನು ವಿವರವಾಗಿ ತಿಳಿಸಿ. ಯಾರು ದೂರನ್ನು ಸಲ್ಲಿಸಬಹುದು ಮತ್ತು ಯಾರ ವಿರುದ್ಧ ವಿಚಾರಣೆ ನಡೆಸಬಹುದು.

(ಬಿ) ಒಬ್ಬ ಆಪಾದಿತನು, ತನ್ನ ಪರವಾಗಿ ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಯ ಡಿಕ್ರಿಯನ್ನು ಪಡೆದುಕೊಂಡ ನಂತರ, ಪ್ರತ್ಯೇಕವಾಗಿ ವಾಸಿಸುತ್ತಿದ್ದ ತನ್ನ ಹೆಂಡತಿಯ ಬಳಿಗೆ ಹೋಗಿ, ಆಕೆಯ ಸಮ್ಮತಿ ಇಲ್ಲದೆ ಆಕೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸುತ್ತಾನೆ. ಆತನ ಮೇಲೆ ಅತ್ಯಾಚಾರದ ವಿಚಾರಣೆ ನಡೆಸಬೇಕೆಂದು ಆಕೆ ಕೇಳುತ್ತಾಳೆ. IPC ಯ ಅನ್ವಯ ಆತನ ಯಾವ ಅಪರಾಧಗಳಿಗಾಗಿ ಆತನ ಮೇಲೆ ವಿಚಾರಣೆ ನಡೆಸಬಹುದು ಎಂಬ ಬಗ್ಗೆ ನಿಮ್ಮ ಕಾನೂನಿನ ಸಲಹೆ ಕೊಡಿ.

**20.** ಒಂದು ಕಾನೂನು ಮಾನ್ಯ ಗುತ್ತಿಗೆ ಮಾಡಿಕೊಳ್ಳಬೇಕಾದರೆ ಪೂರ್ವ ವೃತ್ತಾಂತಗಳೇನಿರಬೇಕು ಮತ್ತು ಅದು ಹೇಗೆ ನಿರರ್ಥಕಗೊಳ್ಳುತ್ತದೆ ಎಂಬುದನ್ನು ನಿರೂಪಿಸಿ. ಉಪಬಂಧಗಳು/ಪ್ರಕರಣಗಳನ್ನು ಉಲ್ಲೇಖಿಸಿ.

**21.** (ಎ) ಮಾರಾಟದ ಗುತ್ತಿಗೆಯ ಅವಶ್ಯಕ ಅಂಶಗಳನ್ನು ವಿವರಿಸಿ. ಮಾರಾಟ ಮತ್ತು ಬಾಡಿಗೆ ಖರೀದಿಗಳಿಗಿರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

(ಬಿ) ಒಂದು ಪಾಲುದಾರಿಕೆಯ ಪ್ರಯೋಜನಗಳನ್ನು ಹೊಂದಲು ಒಬ್ಬ ಅಪ್ರಾಪ್ತ ವಯಸ್ಕರನ್ನು ಅಂಗೀಕರಿಸುವುದಕ್ಕೆ ಸಂಬಂಧಿಸಿದ ಕಾನೂನನ್ನು ನಿರೂಪಿಸಿ. ಪಾಲುದಾರಿಕೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಆತನ ಹೊಣೆಗಾರಿಕೆಯನ್ನು ತಿಳಿಸಿ.

**22.** (a) Explain the essential ingredient of negligence with reference to Donoghue v. Stevenson case. Discuss the concept of medical negligence as applied in CPA.

(b) Critically examine the doctrine of 'sovereign immunity and exemption' in tortuous liability. Distinguish it from 'act of state'.

**22.** (ಎ) ಡೊನೋಗ್ v. ಸ್ಟೀವನ್‌ಸನ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯತನದ ಆವಶ್ಯಕ ಘಟಕವನ್ನು ವಿವರಿಸಿ. CPA ಯಲ್ಲಿ ಬಳಸಿರುವಂತೆ ವೈದ್ಯಕೀಯ ನಿರ್ಲಕ್ಷ್ಯತನದ ಪರಿಕಲ್ಪನೆಯನ್ನು ವಿವರಿಸಿ.

(ಬಿ) ಅಪಕೃತ್ಯದ ಹೊಣೆಗಾರಿಕೆಯಲ್ಲಿ, 'ಸಾರ್ವಭೌಮ ಉನ್ಮುಕ್ತಿ ಮತ್ತು ಅಪವಾದ'ದ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ. 'act of state' ನಿಂದ ಇದು ಹೇಗೆ ಭಿನ್ನವಾಗಿದೆ ಸ್ಪಷ್ಟಪಡಿಸಿ.

# 2011

# ಕಾನೂನು

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

### ಸೂಚನೆಗಳು

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

ಭಾಗ *A*, *B* ಮತ್ತು *C* ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.
ಭಾಗ *D* ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.

***Note :*** *The English version of the instructions is printed on the front cover of this question paper.*

SEAL